ಯಾತ್ರಿನಿವಾಸ ನಿರ್ಮಿಸಲು ಬೇಕಾದ ಸ್ಥಳ ನೀಡಿದಲ್ಲಿ ಯಾತ್ರಿನಿವಾಸ ನಿರ್ಮಿಸಲು ಕ್ರಮವಹಿಸಲಾಗುವುದೆಂದು ತಿಳಿಸಲಾಯಿತು. ಮಾನ್ಯ ಶಾಸಕರು ಜಮೀನು ಕೂಡಿಸಲು ಕ್ರಮವಹಿಸುವುದಾಗಿ ತಿಳಿಸಿ ಸ್ಥಳದಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ಕಡತ ತಯಾರಿಸಲು ಮಾನ್ಯ ಶಾಸಕರು ಸೂಚಿಸಿದರು. ಮೆ: ಆರ್.ಸಿ. ಆರ್ಕಿಟೆಕ್ಟ್ಸ್‌ರವರಿಗೆ ರಸ್ತೆ ಮತ್ತು ಯಾತ್ರಿನಿವಾಸ ನಿರ್ಮಾಣದ ಬಗ್ಗೆ DPR ತಯಾರಿಸಿಕೊಂಡು ಸ್ಥಳದಲ್ಲೇ ಸೂಚಿಸಲಾಯಿತು.

ಬೆಂಗಳೂರಿನಲ್ಲಿ ದೇವಸ್ಥಾನಗಳ ಅಭಿವೃದ್ಧಿ

191 (455) ಶ್ರೀ ನರೇಂದ್ರಬಾಬು ಸಿ.ಎ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ದೇವಸ್ಥಾನಗಳೆಷ್ಟು;

ಆ) ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳೆಷ್ಟು (ಮಾಹಿತಿ ನೀಡುವುದು);

ಇ) ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇವಸ್ಥಾನದ ಅಭಿವೃದ್ಧಿಗೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಹಾಗೂ ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನದ ಅಭಿವೃದ್ಧಿಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು ಹಾಗೂ ಖರ್ಚಾದ ಹಣವೆಷ್ಟು;

ಈ) ಉಳಿಕೆಯಿರುವ ಅನುದಾನವನ್ನು ಖರ್ಚು ಮಾಡಲು ತೆಗೆದುಕೊಂಡ ಕ್ರಮವೇನು?

ಡಾ॥ ವಿ.ಎಸ್.ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ 1021 ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1176 ದೇವಸ್ಥಾನಗಳು ಬರುತ್ತವೆ.

ಆ) ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ 05 ಮುಜರಾಯಿ ದೇವಸ್ಥಾನಗಳು ಬರುತ್ತವೆ.

1) ಶ್ರೀ ವರದರಾಯಸ್ವಾಮಿ ದೇ, ಕೇತಮಾದನಹಳ್ಳಿ
2) ಶ್ರೀ ಆಂಜನೇಯಸ್ವಾಮಿ ದೇ, ಕೇತಮಾದನಹಳ್ಳಿ
3) ಶ್ರೀ ಆಂಜನೇಯಸ್ವಾಮಿ ದೇ, ಕಾಮಾಕ್ಷಿಪಾಳ್ಯ

4) ಶ್ರೀ ಹನುಮಂತ ದೇವರು ದೇ. ನಾಗಪುರ
5) ಶ್ರೀ ನರಸಿಂಹ ದೇವರು, ಲಗ್ಗೆರೆ

ಇ) ಮುಜರಾಯಿ ಇಲಾಖಾ ವ್ಯಾಪ್ತಿಗೆ ಬರುವ ಬೆಂಗಳೂರು ನಗರ ಜಿಲ್ಲೆಯಲ್ಲಿನ ದೇವಸ್ಥಾನಗಳ ಅಭಿವೃದ್ಧಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

ಸಾಲು	ಸಂಸ್ಥೆಗಳು	ಮೊತ್ತ (ರೂ. ಲಕ್ಷಗಳಲ್ಲಿ)
2006–07	03	3.75
2007–08	09	17.25
2008–09	07	10.65
2009–10	01	1.80
	20	33.45

ಮಹಾಲಕ್ಷ್ಮಿ ಬಡಾವಣೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ದೇವಸ್ಥಾನಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಈ) ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಮಾಡದೆ ಇರುವು ದರಿಂದ ಖರ್ಚಾದ ಹಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ

193 (457) ಶ್ರೀ ನರೇಂದ್ರ ಬಾಬು.ಸಿ.ಎ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಲ್ಲಿ ಸರ್ಕಾರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಟ್ರಾನ್ಸ್ ಫಾರ್ಮರ್‌ಗಳ